# ಮರದ ಒಡವೆ ಟ್ರೆಂಡ್

ಸುಂದರವಾಗಿ ಕಾಣಬೇಕೆಂದು ಮಹಿಳೆಯರು ಮಾಡಿಕೊಳ್ಳುವ ಅಲಂಕಾರಕ್ಕೆ ಚಿನ್ನ, ಬೆಳ್ಳಿ, ವಜ್ರಗಳದ್ದೇ ಆಭರಣ ಬೇಕೆಂದೇನಿಲ್ಲ. ಪ್ಲಾಸ್ಟಿಕ್, ರಬ್ಬರ್, ಮೆಟಲ್‌ಗಳಿಂದ ತಯಾರಿಸುವ ಕೃತಕ ಆಭರಣಗಳ ಸಾಲಿಗೆ ಇದೀಗ ಮರದಿಂದ ಮಾಡಿದ ಒಡವೆಗಳು ಸೇರ್ಪಡೆಯಾಗಿವೆ. ಫ್ಯಾಷನ್ ಪ್ರಪಂಚದಲ್ಲಿ ಟ್ರೆಂಡ್ ಸೃಷ್ಟಿಸಿದ ಈ ಮರದ ಆಭರಣಗಳು ಮಿಕ್ಸ್ ಅಂಡ್ ಮ್ಯಾಚ್‌ಗೂ ಸೈ ಎನಿಸಿವೆ.

■ ಆಶಾ ಎಸ್. ಕುಲಕರ್ಣಿ



ಫ್ಯಾಷನ್ ಲೋಕದಲ್ಲಿ ಬದಲಾವಣೆ ನಿರಂತರ. ಅದು ನಿಂತ ನೀರಲ್ಲ. ನಮ್ಮ ದಿನನಿತ್ಯದ ಬಳಕೆಯ ವಸ್ತುಗಳಿಂದ ವಿವಿಧ ವಿನ್ಯಾಸಗಳ ಒಡವೆ ತಯಾರಿಸಿ ಉಡುಪಿಗೆ ತಕ್ಕ ಹಾಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡು ಧರಿಸುವುದು ಮಹಿಳೆಯರಿಗೆ ಯಾವತ್ತೂ ಪ್ರಿಯವಾದದ್ದೇ. ಅವುಗಳಲ್ಲಿ ಇದೀಗ ಮರದ ಆಭರಣಗಳು ಟ್ರೆಂಡಿಯಾಗಿವೆ. ಮೊದಲೆಲ್ಲಾ ಫರ್ನಿಚರ್ ತಯಾರಿಕೆಗೆ, ಇಂಧನಕ್ಕೆ ಮತ್ತು ಆಟಿಕೆಗಳಿಗೆ ಮಾತ್ರವೇ ಬಳಕೆಯಾಗುತ್ತಿದ್ದ ಮರ ಇದೀಗ ಫ್ಯಾಷನ್ ಲೋಕಕ್ಕೂ ಎಂಟ್ರಿ ಕೊಟ್ಟಿದೆ.

ಹಾಗೆಂದು ಮರದಿಂದ ತಯಾರಿಸುವ ಆಭರಣಗಳ ಟ್ರೆಂಡ್ ಇಂದು ನಿನ್ನೆಯದಲ್ಲ. ಅನಾದಿ ಕಾಲದಿಂದಲೂ ಮಾನವ ತನ್ನ ಸೌಂದರ್ಯ ವೃದ್ಧಿಗೆ ಮರಗಳನ್ನು ಬಳಸಿಕೊಳ್ಳುತ್ತಿದ್ದ. ಮರದಿಂದ ಸುಗಂಧ ದ್ರವ್ಯ ತಯಾರಿಸುವುದು, ಮರದ ತುಂಡಿನಿಂದ ಸಾಕಷ್ಟು ಆಭರಣಗಳನ್ನು ತಯಾರಿಸಿಕೊಂಡು ಧರಿಸುವುದು ಹೀಗೆ, ಗಿಡಗಳ ಎಲೆಗಳಿಂದ ವಿವಿಧ ವಿನ್ಯಾಸಗಳನ್ನು ರಚಿಸಿ ತೊಟ್ಟುಕೊಳ್ಳುವುದು ಸಾಮಾನ್ಯವಾಗಿತ್ತು. ಅವುಗಳಲ್ಲಿ ಪ್ರಮುಖವಾಗಿ ಕತ್ತಿನ ಸರ, ಬಳೆ, ಕಿವಿಯೋಲೆ, ಕಾಲಿಗೆ ಧರಿಸುತ್ತಿದ್ದ ಕಡಗ, ಕೇಶಾಲಂಕಾರಕ್ಕೆ ಬಳಸುತ್ತಿದ್ದ ಪಿನ್ನುಗಳು... ಹೀಗೆ ವಿವಿಧ ರೀತಿಯ ಆಭರಣಗಳು ಪ್ರಚಲಿತದಲ್ಲಿದ್ದವು. ಇತ್ತೀಚೆಗೆ ಮತ್ತೆ ಇವೇ ಆಭರಣಗಳು ಫ್ಯಾಷನ್ ಲೋಕದಲ್ಲಿ ಬಹಳ ಜನಪ್ರಿಯತೆ ಗಳಿಸುತ್ತಿದೆ.

ಮರದ ತುಂಡುಗಳಿಂದ ತಯಾರಿಸಿದ ಕ್ಲಿಪ್‌ಗಳು, ಹೇರ್ ಪಿನ್ನುಗಳು ಇದೀಗ ಸಾಕಷ್ಟು ಟ್ರೆಂಡಿಯಾಗಿವೆ. ವಿವಿಧ ಆಕಾರಗಳಲ್ಲಿ ದೊರೆಯುವ ಈ ಪಿನ್ನುಗಳನ್ನು ತುರುಬು ಕಟ್ಟಲು ಮತ್ತು ಪೋನಿಟೈಲ್‌ಗೆ ಬಳಸಬಹುದು. ಕಡಿಮೆ ಸಮಯದಲ್ಲಿ ಸ್ಟೈಲಿಶ್ ಲುಕ್ ಅನ್ನು ನೀಡುವ ಈ ಬಗೆಯ ಕ್ಲಿಪ್‌ಗಳು ಸಾಕಷ್ಟು ಬಣ್ಣಗಳಲ್ಲಿ ದೊರೆಯುತ್ತಿದ್ದು ಉಡುಪುಗಳಿಗೆ ಮ್ಯಾಚ್ ಮಾಡಿ ಧರಿಸಬಹುದು. ಈ ಬಗೆಯ ಪಿನ್ನುಗಳ ತುದಿಗಳಲ್ಲಿ ಸುಂದರವಾದ ಲಟ್ಕನ್‌ಗಳಿಂದ ಅಲಂಕರಿಸಬಹುದಾಗಿದೆ.

ಮರದ ಬೀಡ್ಸ್‌ಗಳನ್ನು ನಮಗೆ ಬೇಕಾದ ಆಕಾರ ಮತ್ತು ಅಳತೆಗೆ ಪರಿವರ್ತಿಸಿ ಅವುಗಳಿಂದ ಸುಂದರವಾದ ನೆಕ್ಲೇಸ್‌ಗಳನ್ನು ತಯಾರಿಸಬಹುದು. ಸಾಕಷ್ಟು ಬಣ್ಣಗಳಲ್ಲಿ ಮತ್ತು ಆಕಾರಗಳಲ್ಲಿ ದೊರೆಯುವ ಈ ಬೀಡ್ಸ್‌ಗಳಿಂದ ತಯಾರಾದ ನೆಕ್ಲೇಸ್‌ಗಳು ಅತ್ಯಂತ ಆಕರ್ಷಕವಾಗಿದ್ದು ಯಾವುದೇ ಬಟ್ಟೆಗೆ ಮ್ಯಾಚ್ ಮಾಡಿ